ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ) ಮಂಜೂರಾದ ಮನೆಗಳ ಸಂಖ್ಯೆ : 2,36,633

ಒದಗಿಸಿದ ಮೊತ್ತ :

ಸಹಾಯ ಧನಕ್ಕಾಗಿ ಒದಗಿಸಿದ ಮೊತ್ತ ರೂ. 12102.88 ಲಕ್ಷ

ಆ) ಬಿಡುಗಡೆಯಾದ ಮೊತ್ತ : 21435.76 ಲಕ್ಷಗಳು.

ಇ)

| | ಒದಗಿಸಿದ ಮನೆಗಳ ಸಂಖ್ಯೆ | ಒದಗಿಸಿದ ಹಣ | ಬಿಡುಗಡೆಯಾದ ಹಣ |
|---|---|---|---|
| ಉಡುಪಿ | 2174 | 456.50 | 187.03 |
| ಕುಂದಾಪುರ | 800 | 155.00 | 140.46 |
| ಕಾರ್ಕಳ | 1450 | 281.50 | 149.65 |

ಉಡುಪಿ ಜಿಲ್ಲೆಯಲ್ಲಿ ನಿವೇಶನ ಮಂಜೂರಾತಿ ಮತ್ತು ಅಕ್ರಮ ಸಕ್ರಮದ ವಿಚಾರ ಕುರಿತು.

2516(3127)

ಶ್ರೀ ಗೋಪಾಲ ಬಂಡಾರಿ.ಹೆಚ್.(ಕಾರ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ನಮೂನೆ 50ರಲ್ಲಿ ಮತ್ತು 53ರಲ್ಲಿ ಸಲ್ಲಿಸಿರುವ ಅಕ್ರಮ ಸಕ್ರಮ ಅರ್ಜಿಗಳ ಸಂಖ್ಯೆ ಎಷ್ಟು; ಆ ಪೈಕಿ ಎಷ್ಟು ಅರ್ಜಿಗಳು ತೀರ್ಮಾನವಾಗಿವೆ; ಬಾಕಿ ಎಷ್ಟಿವೆ; (ತಾಲ್ಲೂಕುವಾರು ವಿವರ ಕೊಡಬೇಕಾಗಿ ವಿನಂತಿ)

ಆ) ಅಕ್ರಮವಾಗಿ ಅನೇಕ ವರ್ಷಗಳಿಂದ ಮನೆ ಕಟ್ಟಿಕೊಂಡವರಿಗೆ ಅವರು ವಾಸವಿರುವ ನಿವೇಶನ ಮಂಜೂರು ಮಾಡಲು ಕೈಗೊಂಡ ಕ್ರಮವೇನು.

ಇ) ಮಧ್ಯಮ ವರ್ಗದವರಿಗೆ ವಾರ್ಷಿಕ ಆದಾಯ 12 ಸಾವಿರಕ್ಕಿಂತ ಜಾಸ್ತಿ ಇರುವವರಿಗೆ ಸ್ಥಳ ಮೌಲ್ಯ ಪಾವತಿಸಿದರೆ ನಿವೇಶನ ಮಂಜೂರು ಮಾಡಲು

ಅವಕಾಶವಿದೆಯೇ; ಆಗಿದ್ದಲ್ಲಿ ಉಡುಪಿ ಜಿಲ್ಲೆಯಲ್ಲಿ ಎಷ್ಟು ನಿವೇಶನ ಮಂಜೂರು ಮಾಡಲಾಗಿದೆ? (ತಾಲ್ಲೂಕುವಾರು ವಿವರ ಕೊಡಬೇಕಾಗಿ ವಿನಂತಿ).

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಉಡುಪಿ ಜಿಲ್ಲೆಯಲ್ಲಿ ನಮೂನೆ 50 ಮತ್ತು 53ರಲ್ಲಿ ಸಲ್ಲಿಸಿದ ಅಕ್ರಮ ಸಕ್ರಮ ಅರ್ಜಿಗಳ ತಾಲೂಕುವಾರು ವಿವರ ಈ ಕೆಳಗಿನಂತೆ ಇದೆ.

ನಮೂನೆ-50

| ತಾಲ್ಲೂಕು | ಒಟ್ಟು ಅರ್ಜಿಗಳ ಸಂಖ್ಯೆ | ತೀರ್ಮಾನವಾದ ಅರ್ಜಿಗಳು | ಬಾಕಿ |
|---|---|---|---|
| ಉಡುಪಿ | 12608 | 10900 | 1708 |
| ಕುಂದಾಪುರ | 26792 | 23273 | 3519 |
| ಕಾರ್ಕಳ | 10958 | 10588 | 370 |
| ಒಟ್ಟು | 50358 | 44761 | 5597 |

ನಮೂನೆ-53

| | | | |
|---|---|---|---|
| ಉಡುಪಿ | 13416 | - | 13416 |
| ಕುಂದಾಪುರ | 30013 | - | 30013 |
| ಕಾರ್ಕಳ | 14285 | - | 14285 |
| ಒಟ್ಟು | 57714 | - | 57714 |

ಆ) ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮನೆ ಕಟ್ಟಿಕೊಂಡವರಿಗೆ ನಿವೇಶನ ಸಕ್ರಮ ಮಾಡಲು ಕರ್ನಾಟಕ ಸ್ವಾಧೀನತೆಯಲ್ಲಿ ಇರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿ ನಿಯಮಗಳು 1969ರಲ್ಲಿ ವಿನಾಯಿತಿ ಕಲ್ಪಿಸಲಾಗಿದೆ. ಸರ್ಕಾರವು ಆರ್‌ಡಿ 57 ಎಲ್‌ಜಿಪಿ 98 (ಭಾಗ-2) ದಿನಾಂಕ 25-3-2000ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

ಇ) ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 18ರನ್ವಯ ನಿವೇಶನ ರಹಿತ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರಿಗೆ ಉಚಿತವಾಗಿ ಮತ್ತು ನಿವೇಶನ ರಹಿತ ಮಧ್ಯಮ ವರ್ಗದವರಿಗೆ ಸ್ಥಳ ಮೌಲ್ಯ ಪಾವತಿಸಿ ಸರ್ಕಾರಿ ಜಮೀನನ್ನು ನಿವೇಶನಕ್ಕಾಗಿ ಮಂಜೂರು ಮಾಡಲು ಅವಕಾಶವಿರುತ್ತದೆ.

| ತಾಲ್ಲೂಕುಗಳು | ಮಂಜೂರುಮಾಡಿದ ನಿವೇಶನಗಳು |
|---|---|
| ಉಡುಪಿ | ಇಲ್ಲ |
| ಕುಂದಾಪುರ | 88 |
| ಕಾರ್ಕಳ | 34 |

ಲಕ್ಷ್ಮೇಶ್ವರ ಪುರಸಭೆ ಸರಹದ್ದಿನಲ್ಲಿ ಬರುವ ವಾರ್ಡ್ ನಂ.23ಕ್ಕೆ ಸಿಟಿ ಸರ್ವೆ ಆಗದೆ ಇರುವುದರ ಬಗ್ಗೆ.

2517( 3187)

ಶ್ರೀ ಗಡ್ಡದೇವರಮಠ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಕ್ಷ್ಮೇಶ್ವರ ಪುರಸಭೆ ಸರಹದ್ದಿನಲ್ಲಿ ಬರುವ ವಾರ್ಡ್ ನಂ.23ಕ್ಕೆ (ಮಂಜಲಾಪುರ) ಸಿಟಿ ಸರ್ವೆ ಆಗದೆ ಇಲ್ಲದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇದನ್ನು ಸರ್ವೆ ಮಾಡಿಸಲು ಸರ್ಕಾರ ಕೈಗೊಳ್ಳುವ ಕ್ರಮ ಏನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಕರಿಗೆ ನಿರ್ದೇಶನ ನೀಡಲಾಗುವುದು.

ಆಶ್ರಯ ಯೋಜನೆಯಲ್ಲಿ ಫಲಾನುಭವಿಗಳಿಗೆ ಹಣ ಪಾವತಿ ಮಾಡದೇ ಇರುವ ಬಗ್ಗೆ.

2518(2830)